ಕಲ್ಲು ಹಾಕಿ ಸಮುದ್ರದ ಕೊರತೆಯನ್ನು ನೀಗಿಸಲು ಶಾಶ್ವತವಾದ ಒಂದು ಕಾಮಗಾರಿಯನ್ನು ಮಾಡಿದ್ದೇವೆ. ಇವುಗಳು ಶಾಶ್ವತವಾಗಿ ಕೂಡ ಉಳಿದಿವೆ. ಅಲೆ ಬಂದಾಗ ತುರ್ತಾಗಿ ತಡೆಯುವುದಕ್ಕೆ ಮಾತ್ರ ಸಣ್ಣ ಕಲ್ಲನ್ನು ಹಾಕುತ್ತೇವೆ. ಸುಣ್ಣದ ಕಲ್ಲು ತೆಗೆಯುವುದರಿಂದ ಇದು ಉಂಟಾಗುತ್ತಿದೆಯೋ ಇಲ್ಲವೋ ಎಂಬ ಸಂಪೂರ್ಣವಾದ ಮಾಹಿತಿಯನ್ನು ನಾವು ತರಿಸಿಲ್ಲ, ಮಾನ್ಯ ಸದಸ್ಯರೇನೂ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ, ನಾನು ಇದರ ಬಗ್ಗೆ ತಜ್ಞರ, ಪರಿಣಿತರ, ಸಂಬಂಧಪಟ್ಟ ಅಧಿಕಾರಿಗಳ ಹತ್ತಿರ ಸಮಾಲೋಚನೆ ಮಾಡಿ ಇದು ಹೌದು ಅಥವಾ ಇಲ್ಲವೋ ಎನ್ನುವುದರ ಬಗ್ಗೆ ಸಂಪೂರ್ಣವಾದ ಮಾಹಿತಿಯನ್ನು ಸನ್ಮಾನ್ಯ ಸದಸ್ಯರಿಗೆ ಒದಗಿಸಿಕೊಡುತ್ತೇನೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

(ಏ) ರಾಜ್ಯ ಸರ್ಕಾರಕ್ಕೆ ಸೇರಿದ 24 ಎಕರೆ ಜಮೀನಿಗೆ ಬೋಗಸ್ ಹಕ್ಕಪತ್ರಗಳನ್ನು ಸೃಷ್ಟಿ ಮಾಡಿಕೊಂಡು ವಿಶ್ವಭಾರತಿ ಹೌಸಿಂಗ್ ಕೋ-ಆಪರೇಟಿವ್ ಸೊಸೈಟಿಯವರು ಮಾರಾಟ ಮಾಡಿರುವುದು (ಹುಕ್ಕುಚ್ಚುತಿಗೆ ಸಂಬಂಧಿಸಿದಂತೆ)

ಶ್ರೀ ಎಂ.ಶ್ರೀನಿವಾಸ್ (ಉತ್ತರಹಳ್ಳಿ): ಮಾನ್ಯ ಉಪಾಧ್ಯಕ್ಷರೆ, ಪ್ರಿವಿಲೇಜ್‌ಗೆ ಸಂಬಂಧಪಟ್ಟಂತೆ ವಿಷಯವನ್ನು ಚರ್ಚೆ ಮಾಡಲು ನಾನು ಒಂದು ನೋಟೀಸ್‌ನ್ನು ತಮಗೆ ಕಳುಹಿಸಿಕೊಟ್ಟಿದ್ದೇನೆ.

ಛೇರ್ಮನ್: ತಮ್ಮ ನೋಟಿಸ್ ಬಂದಿದೆ. ಅದನ್ನು ಪರಿಶೀಲನೆ ಮಾಡಿ ನಿರ್ಣಯವನ್ನು ನಾಳೆ ದಿವಸ ತೆಗೆದುಕೊಳ್ಳಲಾಗುತ್ತದೆ.

ಶ್ರೀ ಎಂ.ಶ್ರೀನಿವಾಸ್: ಸನ್ಮಾನ್ಯ ಉಪಾಧ್ಯಕ್ಷರೆ, ಸುಮಾರು 50 ಕೋಟಿ ರೂಪಾಯಿ ಬೆಲೆ ಬಾಳತಕ್ಕಂಥ, ರಾಜ್ಯ ಸರ್ಕಾರಕ್ಕೆ ಸೇರಿದ 24 ಎಕರೆ ಜಮೀನಿಗೆ ಬೋಗಸ್ ಹಕ್ಕುಪತ್ರಗಳನ್ನು ಸೃಷ್ಟಿ ಮಾಡಿಕೊಂಡು ವಿಶ್ವಭಾರತಿ ಹೌಸಿಂಗ್ ಕೋಆಪ್‌ರೇಟಿವ್ ಸೊಸೈಟಿಯವರು ಮಾರಾಟ ಮಾಡಿದ್ದಾರೆಂದು ಈ ಸದನದಲ್ಲಿ ನಾನು ಪ್ರಸ್ತಾಪ ಮಾಡಿದ್ದೆ. ಸಂಬಂಧಪಟ್ಟ ಜಮೀನನ್ನು ವಾಪಸ್ ತೆಗೆದುಕೊಂಡು ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕಲಾಗುತ್ತದೆಂದು ಮಾನ್ಯ ಮಂತ್ರಿಯವರು ಉತ್ತರ ಕೊಟ್ಟಿದ್ದರು. ಅದಾದ ಮೇಲೆ ಇವತ್ತು ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿ ಅವರು ಏನು ಅಡ್ವರ್ಟೈಸ್‌ಮೆಂಟ್ ಕೊಟ್ಟಿದ್ದಾರೆ 'ಈ ಭೂಮಿ ವಿಚಾರದಲ್ಲಿ ಕಾನೂನು ನಡವಳಿಕೆ ಇದ್ದರೂ ಕಾನೂನು ರೀತಿ ಹೋರಾಡುವುದನ್ನು ಬಿಟ್ಟು ಸ್ಥಳೀಯ ಶಾಸಕರಾದ ಶ್ರೀ ಎಂ.ಶ್ರೀನಿವಾಸ್ ಅವರು ವಿಧಾನ ಸಭೆಯಲ್ಲಿ ತನಗೆ ರಕ್ಷಣೆ ಇದೆ ಎಂಬ ಕಾರಣದಿಂದ 1996ರಿಂದ ಈವರೆಗೆ ಮೂರು ಸಾರಿ ಪ್ರಸ್ತಾಪಿಸಿದ್ದಾರೆ. ನ್ಯಾಯಾಲಯಗಳಲ್ಲಿರುವ ವಿಷಯಗಳ ಬಗ್ಗೆ ವಿಧಾನಮಂಡಲದಲ್ಲಿ ಚರ್ಚೆಸಬಾರದೆಂದು ವಾಡಿಕೆ ಇದ್ದರೂ ಸಹ ಶ್ರೀ ಎಂ.ಶ್ರೀನಿವಾಸ್ ಅವರು ವಿಧಾನ ಸಭೆಯಲ್ಲಿ ಮೂರು ಬಾರಿ ಇದೇ ವಿಷಯವನ್ನು ಪ್ರಸ್ತಾಪಿಸಿರುವುದು ನ್ಯಾಯಬಾಹಿರವಾಗುತ್ತದೆಂದು, ಮತ್ತು ನ್ಯಾಯಯಾಲಯದ

ಅಂತಿಮ ಆಜ್ಞೆಯನ್ನು ಕಡೆಗಾಣಿಸಿ ವರ್ತಿಸಿರುವುದು ನ್ಯಾಯಾಲಯಕ್ಕೆ ಅವಹೇಳನ ಮಾಡಿದಂತಾಗಿದೆ'' ಎಂದು ಹೇಳಿದ್ದಾರೆ. ನಾನು ವಿಧಾನ ಸಭೆಯ ಶಾಸಕನಾಗಿರುವುದರಿಂದ ಮತ್ತು ನನ್ನ ಕ್ಷೇತ್ರದಲ್ಲೇ ನೂರಾರು ಕೋಟಿ ರೂಪಾಯಿಗಳು ಬೆಲೆ ಬಾಳತಕ್ಕಂಥ ಜಮೀನಿನ ವಿಷಯದಲ್ಲಿ ಅವ್ಯವಹಾರ ವಾಗಿರುವುದರಿಂದ ಈ ವಿಷಯವನ್ನು ನಾನು ಪ್ರಸ್ತಾಪ ಮಾಡಿದ್ದೆ. ಅವರ ಸ್ವಂತ ಜಮೀನಿನ ವಿಷಯದ ಬಗ್ಗೆ ನಾನು ಪ್ರಸ್ತಾಪ ಮಾಡಿಲ್ಲ. ಹಾಗಾದರೆ ನಾನು ಶಾಸಕನಾಗಿ ಇನ್ಯಾವ ವಿಚಾರವನ್ನು ಪ್ರಸ್ತಾಪ ಮಾಡಬೇಕು? 50 ಕೋಟಿ ರೂಪಾಯಿ ಬೆಲೆ ಬಾಳತಕ್ಕಂಥ 25 ಎಕರೆ ಜಮೀನನ್ನು ಫೋರ್ಜರಿ ಮಾಡಿ ರಿಜಿಸ್ಟ್ರೇಷನ್ ಮಾಡಲಾಗಿದೆ. ಇದರ ಬಗ್ಗೆ ಮಾನ್ಯ ಮಂತ್ರಿಯವರು, ಸಂಬಂಧಪಟ್ಟ ಸಬ್ ರಿಜಿಸ್ಟ್ರಾರ್‌ರವರಿಗೆ ಆದೇಶ ಕೊಟ್ಟು ಆ ಸರ್ವೇ ನಂಬರಿಗೆ ಸೇರಿದ ಜಮಿನುಗಳನ್ನು ರಿಜಿಸ್ಟರ್ ಮಾಡಬಾರದೆಂದು ತಿಳಿಸಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ನನ್ನ ವಿರುದ್ಧ ಪತ್ರಿಕೆಗಳಲ್ಲಿ ಒಂದಲ್ಲ, ನಾಲ್ಕು ಪತ್ರಿಕೆಗಳಲ್ಲಿ ಅಡ್ವರ್ಟೈಸ್‌ಮೆಂಟ್ ಕೊಟ್ಟಿದ್ದಾರೆ. ಇದರಿಂದಾಗಿ ನನ್ನ ಹಕ್ಕುಚ್ಯುತಿ ಯಾಗಿರುವುದರಿಂದ ಈ ವಿಷಯವನ್ನು ಪ್ರಿವಿಲೇಜ್ ಕಮಿಟಿಗೆ ಕಳುಹಿಸಿಕೊಡಬೇಕೆಂದು ಕಳಕಳಿಯಿಂದ ನಾನು ಮನವಿ ಮಾಡುತ್ತೇನೆ.

ಶ್ರೀ ಹೆಚ್.ಎನ್.ನಂಜೇಗೌಡ: ಮಾನ್ಯ ಉಪಾಧ್ಯಕ್ಷರೆ, ಈ ವಿಚಾರದಲ್ಲಿ ಹೆಚ್ಚು ಪ್ರಸ್ತಾಪ ಮಾಡಿ ಯಾರನ್ನೂ ಬೆಟ್ಟದ ರೀತಿ ದೊಡ್ಡವರನ್ನಾಗಿ ಮಾಡುವುದಕ್ಕೆ ನಾನು ಇಷ್ಟಪಡುವುದಿಲ್ಲ. ಇದರಲ್ಲಿ ಏನು ಹೇಳಿದೆ ಎಂದರೆ Page No.121; "Reflections upon members, the particular individuals not been named or otherwise indicated, are equivalent to reflection on the House." "Indignities offered to the House by words spoken or writings published reflecting on its character of proceedings have been constantly punished by both the Lords and the Commons upon principle that such acts tend to obstruct the House in the performance of their functions by diminishing the respect due to them. ಇದು ಇರತಕ್ಕಂಥದ್ದು ಇನ್ನೂ ಒಂದು ಹೇಳುವುದಾದರೆ, Page 127: "Written imputations affecting a Member of Parliament may amount to breach of privilege without perhaps being libels at common law.." ನಾವು ಮಾನನಷ್ಟಕ್ಕೆ ಹಾಕುವುದಕ್ಕೆ ಆಗದೇ ಇರಬಹುದು. "...being libels at common law but to constitute a breach of privilege a libel upon a member but concern the character or conduct of member in that capacity." ಇದು ಇರತಕ್ಕಂಥಾದ್ದು, ಕೃಷ್ಣ ಭಟ್ಟರು ಎನ್ನತಕ್ಕವರು ಇಲ್ಲಿ ಪಬ್ಲಿಷ್

ಮಾಡಿರುವುದೇನೆಂದರೆ, ''ರಕ್ಷಣೆ ಇದೆ ಎಂಬ ಕಾರಣದಿಂದ'' ಅನಗತ್ಯವಾಗಿ ರಕ್ಷಣೆ ಈ ಸಭೆ ಕೊಡುತ್ತದೆ ಎಂಬ ಇಂಪ್ಯುಟೇಷನ್ ಸಭೆಯಲ್ಲೂ ಬಂತು. ''ವಿಧಾನ ಮಂಡಲದಲ್ಲಿ ಚರ್ಚಿಸಬಾರದೆಂದು ವಾದಿಕೆ ಇದ್ದರೂ ಮಾಡಿದ್ದಾರೆ'' ಅಂದರೆ ಸ್ಪೀಕರ್ ಅವರಿಗೂ ಜ್ಞಾನಾರ್ಜನೆ ಇಲ್ಲ ಎಂದು ಆಯಿತು. ಅವಕಾಶ ಮಾಡಿಕೊಟ್ಟುಬಿಟ್ಟಿದ್ದಾರೆ; Speaker is insufficient in his knowledge about conducting the business. ಎಂದಾಗುತ್ತದೆ. ''ಮತ್ತು ನ್ಯಾಯಾಲಯದ ಅಂತಿಮ ಆಜ್ಞೆಯನ್ನು ಕಡೆಗಣಿಸಿ ವರ್ತಿಸಿರುವುದು ನ್ಯಾಯಾಲಯಕ್ಕೆ ಅವಹೇಳನ ಮಾಡಿದಂತಾಗುತ್ತದೆ'' ಅಂದರೆ, ನ್ಯಾಯಾಲಯಕ್ಕೆ ಅವಹೇಳನ ಮಾಡುವುದಕ್ಕೆ ಸ್ಪೀಕರ್‌ರವರು ಮತ್ತು ಈ ಸಭೆ ಅವಕಾಶ ಕೊಟ್ಟಿದೆ ಎಂದು; ಇವೆಲ್ಲವೂ ಪ್ರಿವಿಲೇಜ್ ಆಗುತ್ತದೆ. ಇದಕ್ಕೆ ಚರ್ಚೆ ಏನೂ ಬೇಕಾಗಿಲ್ಲ. ಇದನ್ನು ಪ್ರಿವಿಲೇಜ್ ರೆಫರ್ ಮಾಡಿಬಿಟ್ಟರೆ ಆಯಿತು.

ವೈಸ್ ಛೇರ್ಮನ್: ಇದರ ಬಗ್ಗೆ ನಿರ್ಣಯವನ್ನು ಆನಂತರ ಹೇಳುತ್ತೇನೆ.

ವಿಷಯ: ತಮಿಳುನಾಡು ಮುಖ್ಯಮಂತ್ರಿಯವರು ಪೊಲೀಸರ ಮೇಲೆ ಮಾಡಿರುವ ಹೇಳಿಕೆ.

ಶ್ರೀ ಡಿ.ಕೆ.ಶಿವಕುಮಾರ್: ಮಾನ್ಯ ಉಪಾಧ್ಯಕ್ಷರೆ,....

ಛೇರ್ಮನ್: ಮಾನ್ಯ ಶಿವಕುಮಾರ್‌ರವರೇ ತಮ್ಮ ನೋಟೀಸ್ ಬಂದಿಲ್ಲ.

ಶ್ರೀ ಡಿ.ಕೆ.ಶಿವಕುಮಾರ್: ತಮಿಳುನಾಡಿನ ಮುಖ್ಯ-ಮಂತ್ರಿಯವರಾದ ಕರುಣಾನಿಧಿಯವರು ಪೊಲೀಸರ ಬಗ್ಗೆ ರಿಮಾರ್ಕ್ಸ್ ಮಾಡಿದ್ದಾರೆ. ನಮ್ಮ ಪೊಲೀಸಿನವರು ಏನು ಮಾಡಿದ್ದಾರೆಂದು ಚರ್ಚೆಯಾಗಲೇಬೇಕು. ನಮ್ಮ ಪೊಲೀಸಿನವರು ಮಾಡಿದರೇ? ತಮಿಳುನಾಡು ಪೊಲೀಸಿನವರು ಮಾಡಿದ್ದಾರೆಯೇ? ಯಾರ ಹತ್ತಿರ ಮಲಗಿದರು? ಏನು ಮಾಡಿದರು? ನಾವು ಎಷ್ಟು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ? ಎಸ್.ಟಿಎಫ್.ನವರು ಮಾಡಿದರೇ? ಬಿ.ಎಸ್.ಎಫ್.ನವರು ಮಾಡಿದರಾ ಎಂಬ ಬಗ್ಗೆ ಚರ್ಚೆಯಾಗಲೇಬೇಕಾಗಿದೆ. ಆದ್ದರಿಂದ ಇದಕ್ಕೆ ಅವಕಾಶ ಕೊಡಲೇಬೇಕಾಗಿದೆ. ಒಂದು ರಾಜ್ಯದ ಮುಖ್ಯಮಂತ್ರಿಯವರು ಪೊಲೀಸ್ ಬಗ್ಗೆ ಈ ರೀತಿ ಹೇಳಿದರೆ ಹೇಗೆ?

ಛೇರ್ಮನ್: ಲಿಸ್ಟ್ ಆಗಿರತಕ್ಕಂಥಾದ್ದು ಮತ್ತು ಮೊದಲೇ ಸೂಚನೆ ಕೊಟ್ಟಿರತಕಂಥಾದ್ದನ್ನು ನಾನು ಕರೆದಿದ್ದೇನೆ. ಈ ವಿಷಯದ ಬಗ್ಗೆ ತಾವು ನಾಳೆ ಮಾತನಾಡಿ.